# ವಿದ್ಯುಚ್ಛಕ್ತಿ ಲೋಕಪಾಲರ ಸಮಕ್ಷಮದಲ್ಲಿ

ಸಂಖ್ಯೆ: 16, ಸಿ–1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, (ಜೈನ್ ಆಸ್ಪತ್ರೆ ಹಿಂಭಾಗ),
ವಸಂತನಗರ, ಬೆಂಗಳೂರು–560052.

**ಉಪಸ್ಥಿತಿ: ಶ್ರೀಮತಿ ಆರ್. ಶಾರದ,**
**ವಿದ್ಯುಚ್ಛಕ್ತಿ ಲೋಕಪಾಲರು**

**ಪ್ರಕರಣ ಸಂಖ್ಯೆ: OMB/G/G-493/2022**

**ಆದೇಶ ದಿನಾಂಕ: 28/10/2022**

ಶ್ರೀ ಎಫ್. ಶಣ್ಮುಕಪ್ಪ,
ತಂದೆ ಶ್ರೀ ಫಕೀರಪ್ಪ,
ನಂ. 04, ಸಿದ್ದಿಕೆರಿ ಕ್ಯಾಂಪ್,
ಗಂಗಾವತಿ - 583227.

**ಪ್ರತಿನಿಧಿಸುವವರು:**
ಶ್ರೀ ಸುಭಾಷ್ ಹೊಸಮನಿ,
ತಂದೆ ಶ್ರೀ ಸೊಮಪ್ಪ ಹೊಸಮನಿ,
ಶ್ರೀ ಬಸವೇಶ್ವರ ಆಯಿಲ್ ಇಂಡಸ್ಟ್ರೀಸ್,
ರಾಯಚೂರ್ ರಸ್ತೆ,
ಗಂಗಾವತಿ. – ದೂರುದಾರರು/ಮೇಲ್ಮನವಿದಾರರು

V/S

1. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ),
ಕಾರ್ಯ ಮತ್ತು ಪಾಲನ ಉಪ ವಿಭಾಗ, ಜೆಸ್ಕಾಂ,
ಗಂಗಾವತಿ.

2. ಅಧ್ಯಕ್ಷರು,
ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆ,
ಕಾರ್ಯ ಮತ್ತು ಪಾಲನ ವೃತ್ತ, ಜೆಸ್ಕಾಂ,
ಕೊಪ್ಪಳ. – ಪ್ರತಿವಾದಿಗಳು

ಈ ಮೇಲ್ಮನವಿಯನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣಾ ಆಯೋಗ (ಗ್ರಾಹಕರ ಕುಂದುಕೊರತೆಗಳ ನಿವಾರಣಾ ವೇದಿಕೆ ಮತ್ತು ಲೋಕಪಾಲ) ನಿಯಮಗಳ ಅಡಿಯಲ್ಲಿ, ಗ್ರಾಹಕರ ಕುಂದುಕೊರತೆಗಳ ನಿವಾರಣಾ ವೇದಿಕೆ, ಕೊಪ್ಪಳ ನಗರ, ಪ್ರಕರಣ ಸಂಖ್ಯೆ ಸಿ.ಜಿ.ಆರ್.ಎಫ್:

02/28.03.2022 ಆದೇಶ ಸಂಖ್ಯೆ: ಅಇಂ(ವಿ)/ಉಲೆನಿ/ಲೆಅ/ಸಲೆಅ/ಹಿಸ(ಸಿ)ಕ-84/2022-2023/1091-99, ಇವರ ಆದೇಶ ದಿನಾಂಕ 08.06.2022ರ ವಿರುದ್ಧ ದಾಖಲಿಸಲಾಗಿದೆ.

1) ಈ ಪ್ರಕರಣದ ಸಾರಾಂಶವೇನೆಂದರೆ, ದೂರುದಾರ/ಅಪೀಲುದಾರರು ವಿದ್ಯುತ್ ಸ್ಥಾವರ ಸಂಖ್ಯೆ GHT-80ರ ನೊಂದಾಯಿತ ವಿದ್ಯುತ್ ಗ್ರಾಹಕರಾಗಿದ್ದು, ಬಸವೇಶ್ವರ ಆಯಿಲ್ ಇಂಡಸ್ಟ್ರೀಸ್ ಉದ್ಯಮವನ್ನು ರಾಯಚೂರು ರೋಡ್, ಗಂಗಾವತಿ ಇಲ್ಲಿ ನಡೆಸುತ್ತಿದ್ದರೆಂದು ಸದರಿ ಉದ್ಯಮಕ್ಕೆ ಜೆಸ್ಕಾಂ, ಗಂಗಾವತಿಯಿಂದ 100 KVA, GHT-80 ಮೂಲಕ ವಿದ್ಯುತ್ ಸಂಪರ್ಕವನ್ನು ಹೊಂದಿದ್ದರೆಂದೂ, 2020ರ ಸಾಲಿನಲ್ಲಿ ಕೋವಿಡ್ ಸಾಂಕ್ರಾಮಿಕ ರೋಗದ ಕಾರಣದಿಂದ ಉದ್ಯಮವು ತೀವ್ರ ನಷ್ಟ ಹೊಂದಿತ್ತೆಂದು, ಆದುದರಿಂದ 2021 ಸೆಪ್ಟಂಬರ್ ತಿಂಗಳಲ್ಲಿ 40KV ವಿದ್ಯುತ್ತನ್ನು ಕಡಿತಗೊಳಿಸಿ, ಅಕ್ಟೋಬರ್ 2021ನಲ್ಲಿ ಅಪೀಲುದಾರರ ಮಿಲ್ ಇದ್ದಂತಹ ಆವರಣದಲ್ಲಿ ಒಂದು ಸ್ವಿಮ್ಮಿಂಗ್ ಪೂಲ್, ಡಾಬಾ ಹಾಗೂ ವೇ ಬ್ರಿಡ್ಜನ್ನು ತಮ್ಮ ಉದ್ಯಮದ ಉಪಯೋಗಕ್ಕಾಗಿ ಅಳವಡಿಸಿಕೊಂಡಿದ್ದರೆಂದು, ಆ ಮೂಲಕ ಆಯಿಲ್ ಇಂಡಸ್ಟ್ರೀಸ್ ಮೂಲಕ ಉಂಟಾಗಿದ್ದ ನಷ್ಟವನ್ನು ಸರಿ ತೂಗಿಸಿಕೊಂಡು ಹೋಗುತ್ತಿದ್ದರೆಂದು ನುಡಿದಿರುತ್ತಾರೆ.

2) ಈ ರೀತಿ ಇರುವಲ್ಲಿ ಅಕ್ಟೋಬರ್ 2021ರ ಸಾಲಿನಲ್ಲಿ ಅಪೀಲುದಾರರ ಉದ್ಯಮಕ್ಕೆ ಕೊಪ್ಪಳದ ಜೆಸ್ಕಾಂ ಸ್ಕ್ವಾಡ್‌ರವರು ಭೇಟಿ ನೀಡಿದ್ದರೆಂದು ಹಾಗೂ ಅಪೀಲುದಾರರು ಬಳಸಿದಂತಹ ಒಟ್ಟು ವಿದ್ಯುತ್‌ನ್ನು ಕಮರ್ಷಿಯಲ್ ಎಂದು ಪರಿಗಣಿಸಿದ್ದರೆಂದು ಹಾಗೂ ಮೂರು ತಿಂಗಳ

ಹಿಂದಿನಿಂದ ರೂ. 10,800/- ಬಿಲ್ ಪಾವತಿ ಮಾಡಲು ನವೆಂಬರ್ ತಿಂಗಳಲ್ಲಿ ನೋಟೀಸು ಕಳಿಸಿಕೊಟ್ಟಿದ್ದರೆಂದು ನುಡಿದಿರುತ್ತಾರೆ.

3) ಮತ್ತೆ ಅಪೀಲುದಾರರು, ತಾವು ಜೆಸ್ಕಾಂ ಸಂಸ್ಥೆಯ ಪ್ರಾಮಾಣಿಕ ಗ್ರಾಹಕರಾಗಿದ್ದು ವಿದ್ಯುತ್ ಸಂಪರ್ಕವನ್ನು ಪಡೆದಾಗಿನಿಂದ ಇಲ್ಲಿಯವರೆಗೆ ಮಿನಿಮಮ್ ಚಾರ್ಜಗಿಂತ ಕಡಿಮೆ ವಿದ್ಯುತ್ತನ್ನು ಬಳಸುತ್ತಿದ್ದು ಜೆಸ್ಕಾಂ ಕಂಪನಿಗೆ ವಿದ್ಯುತ್‌ನ ಪ್ರತಿ ಯೂನಿಟ್‌ಗೆ ರೂ. 18.50/- ಪೈಸೆಯಂತೆ ಹಣ ಸಂದಾಯ ಮಾಡುತ್ತಿದ್ದರೆಂದು, ಈ ಬಗ್ಗೆ 14.12.2021 ಹಾಗೂ 24.12.2021 ಗುಲ್ಬರ್ಗಾ ಜೆಸ್ಕಾಂ ಎಂ.ಡಿರವರಿಗೆ ಪತ್ರವನ್ನು ಕೂಡ ಬರೆದಿದ್ದರೆಂದು, ಸದರಿ ಮನವಿಗಳಿಗೆ ಎಂ.ಡಿರವರು ಸ್ಪಂದಿಸಿ ತೀರ್ಮಾನ ತೆಗೆದುಕೊಳ್ಳಲು ದಿನಾಂಕ 30.12.2021ರಂದು ಪತ್ರ ಬರೆದಿದ್ದರೆಂದು ನುಡಿದಿರುತ್ತಾರೆ. ಇದರ ಅನ್ವಯ ಗಂಗಾವತಿ ಕಾರ್ಯಪಾಲಕ ಅಭಿಯಂತರರು ಅಪೀಲುದಾರರ ಸ್ಥಾವರಕ್ಕೆ ಭೇಟಿ ಕೊಟ್ಟು ಅವರ ಮನವಿಯನ್ನು ಆಲಿಸಿ ಸ್ಥಾವರಕ್ಕೆ ಸಬ್ ಮೀಟರ್ (sub-meter) ಅಳವಡಿಸಿಕೊಳ್ಳಲು ಪತ್ರ ಬರೆದಿದ್ದರೆಂದು ನುಡಿದಿರುತ್ತಾರೆ. ಸದರಿಯವರ ಆದೇಶದಂತೆ ಸಬ್ ಮೀಟರ್‌ನ್ನು (sub-meter) ಅಳವಡಿಸಿಕೊಳ್ಳಲು ಗಂಗಾವತಿ ಜೆಸ್ಕಾಂ ಕಛೇರಿಗೆ ದಿನಾಂಕ 17.02.2022ರಂದು ಒಂದು ಅರ್ಜಿಯನ್ನು ಅಪೀಲುದಾರರು ನೀಡಿದ್ದರೆಂದು ಅದರಂತೆ ಗಂಗಾವತಿ ಜೆಸ್ಕಾಂನ ಕಾರ್ಯಪಾಲಕ ಅಭಿಯಂತರರು ಸಬ್ ಮೀಟರ್‌ನ್ನು (sub-meter) ಅಳವಡಿಸಿಕೊಳ್ಳಲು ಪರವಾನಗಿ ನೀಡಿ ದಿನಾಂಕ 22.02.2022ರಂದು ಪತ್ರ ಮುಖೇನ ತಿಳಿಸಿದ್ದರೆಂದು ನುಡಿದಿರುತ್ತಾರೆ.

4) ಮತ್ತೆ ಮುಂದುವರೆದು ಅಪೀಲುದಾರರು ಗಂಗಾವತಿ ಜೆಸ್ಕಾಂ ಕಾರ್ಯ ಪಾಲಕ ಅಭಿಯಂತರರ ಆದೇಶದಂತೆ ದಿನಾಂಕ 26.01.2022ರಂದು ಸಬ್ ಮೀಟರ್‌ನ್ನು (sub-meter) ಖರೀದಿಸಿದ್ದರೆಂದು ಇದಕ್ಕೆ ಸಂಪರ್ಕ ಕೊಡುವಂತೆ

ದಿನಾಂಕ 25.02.2022ರಂದು ಅರ್ಜಿಯನ್ನು ಕೊಟ್ಟಿರುತ್ತಾರೆಂದು ಇದಕ್ಕೆ ಅನುಸಾರವಾಗಿ ಗುಲಬರ್ಗ ಜೆಸ್ಕಾಂ ಎಂ.ಡಿರವರು ದಿನಾಂಕ 30.12.2021ರಂದು ಗಂಗಾವತಿ ಕಾರ್ಯಪಾಲಕ ಅಭಿಯಂತರರಿಗೆ ವಿಚಾರಣೆ ಮಾಡಿ ತಿರ್ಮಾನ ತೆಗೆದುಕೊಳ್ಳುವಂತೆ ಪತ್ರ ಮುಖೇನ ತಿಳಿಸಿದ್ದರೆಂದು ಆಗ ತಾವು ದಿನಾಂಕ 28.01.2022ರಂದು ಗಂಗಾವತಿ ಜೆಸ್ಕಾಂ ಕಛೇರಿಯ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)ರವರಿಗೆ ಪತ್ರ ಬರೆದು ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ರವರು ಆದೇಶ ಕೊಡುವವರೆಗೆ ತಮ್ಮ ಬಿಲ್ಲನ್ನು ತಡೆಹಿಡಿಯಲು ಮನವಿ ಮಾಡಿಕೊಂಡಿದ್ದವೆಂದು ಈ ರೀತಿ ಇರುವಾಗ್ಯೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)ರವರು ತಮ್ಮ ವಿದ್ಯುತ್ ಬಿಲ್ಲನ್ನು ಕಮರ್ಷಿಯಲ್ ಎಂದು ಪರಿಗಣಿಸಿ ಡಿಸಂಬರ್ 2021, ಜನವರಿ 2022 ಹಾಗೂ ಫೆಬ್ರುವರಿ 2022 ಅಂದರೆ ಒಟ್ಟು ಮೂರು ತಿಂಗಳ ಬಿಲ್ಲನ್ನು ದ್ವಿಗುಣಗೊಳಿಸಿ ಫೆಬ್ರುವರಿ 10ರಂದು ತಮಗೆ ಬಿಲ್ಲು ಮಾಡಿ ಕೊಟ್ಟಿದ್ದರೆಂದು ಇದರಿಂದ ನೊಂದು ತಾವು ಗ್ರಾಹಕರ ಕುಂದು ಕೊರತೆಗಳ ನಿವಾರಣಾ ವೇದಿಕೆರವರಿಗೆ ದೂರು ಸಲ್ಲಿಸಿದ್ದರೆಂದು ಆದರೇ ಗ್ರಾಹಕರ ಕುಂದು ಕೊರತೆಗಳ ನಿವಾರಣಾ ವೇದಿಕೆರವರು ದಾಖಲೆಗಳನ್ನು ಪರಿಶೀಲನೆ ಮಾಡದೆಯೇ ಕಮರ್ಷಿಯಲ್‌ಗಾಗಿ ವಿದ್ಯುತ್ ಬಳಕೆ ಆಗಿದೆಯೆಂದು ಊಹಿಸಿ ಕ್ಲಾಸ್ 42.02, Conditions of Supply of Electricity of Distributions Licensees in the State of Karnatakaನ ಪ್ರಕಾರ ಒಟ್ಟು 8 ತಿಂಗಳ ವಿದ್ಯುತ್ ಬಿಲ್ಲನ್ನು ದ್ವಿಗುಣಗೊಳಿಸಿ ತೀರ್ಪು ಕೊಟ್ಟಿರುತ್ತಾರೆಂದು ಇದರಿಂದ ತಮಗೆ ಅನ್ಯಾಯವಾಗಿದೆ ಎಂದು ಅದಕ್ಕಾಗಿ ತಾವು ಪ್ರಸ್ತುತ ಅಪೀಲನ್ನು ಸಲ್ಲಿಸಿರುತ್ತೇವೆಂದು ತಮ್ಮ ಅಪೀಲನ್ನು ಪುರಸ್ಕರಿಸಿ ಆದೇಶ ಹೊರಡಿಸಬೇಕೆಂದು ಕೋರಿಕೊಂಡಿರುತ್ತಾರೆ.

5) ಅಪೀಲನ್ನು ನೋಂದಣಿ ಮಾಡಿಕೊಂಡ ನಂತರ ಈ ಪ್ರಾಧಿಕಾರವು ಉಭಯಪಕ್ಷಕಾರರಿಗೆ ಈ ಪ್ರಾಧಿಕಾರದ ಮುಂದೆ ಹಾಜರಾಗುವಂತೆ ತಿಳುವಳಿಕೆ ನೋಟೀಸನ್ನು ನೀಡಿರುತ್ತದೆ. ಅದರಂತೆ ಮೇಲ್ಮನವಿದಾರರು ತಮ್ಮ ಪ್ರತಿನಿಧಿಯವರೊಂದಿಗೆ ಹಾಜರಾಗಿರುತ್ತಾರೆ ಅದೇ ರೀತಿ ಒಂದನೇ ಪ್ರತಿವಾದಿಯು ತಾವೇ ಖುದ್ದಾಗಿ ಈ ಪ್ರಾಧಿಕಾರದ ಮುಂದೆ ಹಾಜರಾಗಿರುತ್ತಾರೆ ಮತ್ತು ಒಂದನೇ ಪ್ರತಿವಾದಿಯು ಲಿಖಿತ ತಕರಾರನ್ನು ಸಲ್ಲಿಸಿರುತ್ತಾರೆ.

6) ಸದರಿ ತಕರಾರಿನಲ್ಲಿ ದಿನಾಂಕ 02.11.2021ರ ಪತ್ರದ ಮೂಲಕ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ), HT Rating ಉಪವಿಭಾಗ, ಜೆಸ್ಕಾಂ, ಕೊಪ್ಪಳರವರು GHT-80 ಸ್ಥಾವರದ ದೈನಂದಿನ ಮಾಪಕ ಪರಿಶೀಲನೆ ಮಾಡಿದ್ದರೆಂದು ಆ ಸಮಯದಲ್ಲಿ ಸದರಿ ಸ್ಥಾವರವನ್ನು ಕೈಗಾರಿಕಾ ಉದ್ದೇಶಕ್ಕೆ ಬದಲಾಗಿ ವಾಣಿಜ್ಯ ಉದ್ದೇಶಕ್ಕಾಗಿ ವಿದ್ಯುತ್ ಬಳಕೆ ಮಾಡಿಕೊಳ್ಳುತ್ತಿರುವುದು ಕಂಡು ಬಂದಿತ್ತೆಂದು ಇದರಿಂದ ಜುಲೈ 2021ನಿಂದ ಸಪ್ಟೆಂಬರ್ 2021ವರೆಗೆ ರೂ. 10,803/-ಗಳ ಹಿಂಬಾಕಿ ಮೊತ್ತವನ್ನು ವಿಧಿಸಿದ್ದರೆಂದು ಈ ವಿಚಾರವನ್ನು ಗ್ರಾಹಕರಿಗೆ ದಿನಾಂಕ 20.11.2021ರ ಪತ್ರದ ಮೂಲಕ ಮಾಹಿತಿ ಕೊಟ್ಟು ಹಿಂಬಾಕಿ ಮೊತ್ತವನ್ನು ಪಾವತಿ ಮಾಡುವಂತೆ ಗ್ರಾಹಕರಿಗೆ ತಿಳಿಸಲಾಗಿತ್ತೆಂದು, ದಿನಾಂಕ 30.12.2021ರ ಪತ್ರದ ಅನ್ವಯ ಜೆಸ್ಕಾಂ ಕಲಬುರ್ಗಿ ಮುಖ್ಯ ಅಭಿಯಂತರರು, ವಿದ್ಯುತ್ ಕಾರ್ಯಾಚರಣೆರವರು ಸದರಿ ಸ್ಥಾವರದ ಬಳಕೆದಾರರು ತಮ್ಮ ಸ್ಥಾವರಕ್ಕೆ ವಿಧಿಸಿರುವ ಬಿಲ್ಲು ಕಾಯ್ದೆ ಬಾಹಿರವಾಗಿರುತ್ತದೆಂದು ಮನವಿ ಸಲ್ಲಿಸಿದ ಮೇರೆಗೆ ಸದರಿ ವಿಷಯದ ಬಗ್ಗೆ ಪರಿಶೀಲಿಸಿ ಚಾಲ್ತಿಯಲ್ಲಿರುವ ನಿಗಮದ ನಿಯಮಾನುಸಾರ ಸೂಕ್ತ ಕ್ರಮ ಕೈಗೊಂಡು ವರದಿಯನ್ನು ಸಲ್ಲಿಸಬೇಕು

ಎಂಬುದಾಗಿ ತಿಳಿಸಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನೆ ವಿಭಾಗ, ಜೆಸ್ಕಾಂ, ಗಂಗಾವತಿರವರಿಗೆ ಪತ್ರ ಬರೆದಿದ್ದರೆಂದು ನುಡಿದಿರುತ್ತಾರೆ.

7) ದಿನಾಂಕ 22.02.2022ರ ಪತ್ರದ ಅನ್ವಯ ಕಾರ್ಯ ನಿರ್ವಾಹಕ ಅಭಿಯಂತರರು (ವಿ), ಗಂಗಾವತಿ ರವರು ಗ್ರಾಹಕರಿಗೆ ಡಾಬಾ ಹಾಗೂ ವೇ-ಬ್ರಿಡ್ಜ್‌ಗಳಿಗೆ 10KW ಮತ್ತು ಸ್ವಿಮಿಂಗ್ ಫೂಲ್‌ಗೆ ಪ್ರತ್ಯೇಕ ಮೀಟರ್ ಅಳವಡಿಸಿಕೊಳ್ಳಲು ಅವಕಾಶ ಇರುವುದಿಲ್ಲವೆಂದು ಬದಲಾಗಿ ಒಂದು ಸಬ್ ಮೀಟರ್‌ನ್ನು (sub-meter) ಅಳವಡಿಸಿಕೊಳ್ಳಲು ಅವಕಾಶ ಇರುತ್ತದೆಂದು ಗ್ರಾಹಕರಿಗೆ ಪತ್ರದ ಮೂಲಕ ತಿಳಿಸಿದ್ದರೆಂದು ನುಡಿದಿರುತ್ತಾರೆ. ಆದರೇ ಗ್ರಾಹಕರು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಗಂಗಾವತಿರವರ ಪತ್ರದ ಆಧಾರದ ಮೇರೆಗೆ ಗ್ರಾಹಕರ ಕುಂದು ಕೊರತೆಗಳ ನಿವಾರಣಾ ವೇದಿಕೆರವರಿಗೆ ದೂರು ಸಲ್ಲಿಸಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನೆ ವಿಭಾಗ, ಜೆಸ್ಕಾಂ, ಗಂಗಾವತಿರವರು ನೀಡಿರುವ ದುಪ್ಪಟ್ಟು ಬಿಲ್ಲನ್ನು ರದ್ದುಗೊಳಿಸಬೇಕೆಂದು ಮನವಿ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ತದನಂತರ ದಿನಾಂಕ 08.06.2022ರಂದು ಗ್ರಾಹಕರ ಕುಂದು ಕೊರತೆಗಳ ನಿವಾರಣಾ ವೇದಿಕೆಯು ಆದೇಶವನ್ನು ಹೊರಡಿಸಿ ಸದರಿ ಆದೇಶದ ಮೂಲಕ ಆದೇಶವಾದಂತಹ ದಿನಾಂಕದಿಂದ 15 ದಿನಗಳೊಳಗಾಗಿ ಗ್ರಾಹಕರು ತಮ್ಮ ಸ್ಥಾವರಕ್ಕೆ ಸಬ್ ಮೀಟರ್‌ನ್ನು (sub-meter) ಅಳವಡಿಸಿಕೊಳ್ಳಬೇಕೆಂದು, ಗ್ರಾಹಕರು ಒಪ್ಪಂದ ಮಾಡಿಕೊಂಡಂತಹ ಜಕಾತಿಯಲ್ಲಿ ವಿದ್ಯುತ್ತನ್ನು ಉಪಯೋಗಿಸದೇ ಇರುವುದರಿಂದ ಇ.ಎಸ್ & ಡಿ ಕೋಡ್ ಕ್ಲಾಸ್ 42.02 ಅನ್ವಯ ಜಕಾತಿ ದರದ ಎರಡರಷ್ಟು ಮೊತ್ತವನ್ನು ದಂಡದ ರೂಪದಲ್ಲಿ

ಪಾವತಿಸಬೇಕಾಗಿರುತ್ತದೆಂದು ಮತ್ತು ಹಿಂಬಾಕಿ ಮೊತ್ತವನ್ನು ಪರಿಷ್ಕರಿಸಬೇಕೆಂದು ದಿನಾಂಕ 01.07.2021ರಿಂದ 28.02.2022ರವರೆಗೆ HT-2(b) ಜಕಾತಿಯಲ್ಲಿ ದ್ವಿಗುಣ ದರದಲ್ಲಿ ಬಿಲ್ಲು ತಯಾರಿಸಿ ನೀಡಬೇಕೆಂದು ಹಾಗೂ ದಿನಾಂಕ 01.04.2022ರಿಂದ HT-2(b) ಜಕಾತಿಯಲ್ಲಿ ಸಾಮಾನ್ಯ ದರದಲ್ಲಿ ಬಿಲ್ಲು ನೀಡಬೇಕಾಗಿ ಆದೇಶಿಸಿರುತ್ತಾರೆಂದು ನುಡಿದಿರುತ್ತರೆ. ಸದರಿ ಆದೇಶದಂತೆ ಪರಿಷ್ಕೃತ ಮೊತ್ತ ರೂ. 3,91,008/- ಆಗಿದ್ದು ಅದನ್ನು ಪಾವತಿ ಮಾಡಲು ಗ್ರಾಹಕರಿಗೆ ದಿನಾಂಕ 17.06.2022ರ ಪತ್ರದ ಮೂಲಕ ತಿಳಿಸಿಲಾಗಿರುತ್ತದೆಂದು ಆದರೂ ಕೂಡ ಗ್ರಾಹಕರು ಸಬ್ ಮೀಟರ್‌ನ್ನು (sub-meter) ಅಳವಡಿಸಿಕೊಂಡಿರುವುದಿಲ್ಲವೆಂದು ನುಡಿದಿರುತ್ತಾರೆ, ಮತ್ತು ಏಪ್ರಿಲ್ 2022ರಿಂದ ಎರಡು ಬಾರಿ ದಂಡವನ್ನು (two times penalty) ಬಿಲ್ಲಿನಲ್ಲಿ ವಿಧಿಸಿರುವುದಿಲ್ಲವೆಂದು, ಈ ಎಲ್ಲಾ ಅಂಶಗಳನ್ನು ಪರಿಗಣಿಸಿ ಸೂಕ್ತ ಆದೇಶವನ್ನು ನೀಡಬೇಕೆಂದು ನುಡಿದಿರುತ್ತಾರೆ.

8) ಉಭಯಪಕ್ಷಕಾರರು ಸಲ್ಲಿಸಿದ ಮೇಲ್ಮನವಿ ಹಾಗೂ ಕಂಡಿಕೆವಾರು ಉತ್ತರಗಳನ್ನು ಪರಿಗಣಿಸಿ ಈ ಪ್ರಕರಣವನ್ನು ವಾದವಿವಾದಕ್ಕೆ ಮುಂದೂಡಲಾಗಿತ್ತು. ಅದರಂತೆ ಅಪೀಲುದಾರರು ಹಾಗೂ ಒಂದನೇ ಪ್ರತಿವಾದಿ/ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)ರವರು ಈ ಪ್ರಾಧಿಕಾರದ ಮುಂದೆ ಹಾಜರಾಗಿ ತಮ್ಮ ವಾದವನ್ನು ಮಂಡಿಸಿರುತ್ತಾರೆ.

9) ಉಭಯಪರ ವಾದವಿವಾದಗಳನ್ನು ಕೇಳಿರುತ್ತೇನೆ ಹಾಗೂ ಕಡತದ ಪರಿಶೀಲನೆಯನ್ನು ಮಾಡಿರುತ್ತೇನೆ.

10) ಈ ಹಂತದಲ್ಲಿ ಮೇಲ್ಮನವಿಯ ಇತ್ಯರ್ಥಕ್ಕಾಗಿ ಈ ಕೆಳಕಂಡ ಅಂಶಗಳು ಮೂಡಿಬರುತ್ತವೆ: -

i. ಗ್ರಾಹಕರ ಕುಂದು ಕೊರತೆಗಳ ನಿವಾರಣಾ ವೇದಿಕೆ, ಕೊಪ್ಪಳರವರು ದಿನಾಂಕ 08.06.2022, ಪ್ರಕರಣ ಸಂಖ್ಯೆ: ಸಿ.ಜಿ.ಆರ್.ಎಫ್: 02/28.03.2022, ಆದೇಶ ಸಂಖ್ಯೆ: ಅಇಂ(ವಿ)/ ಉಲೆನಿ/ಲೆಅ/ಸಲೆಅ/ಹಿಸ(ಸಿ)ಕ-84/2022-2023/1091-99 ಪ್ರಕರಣದಲ್ಲಿ ಹೊರಡಿಸಿರುವ ಆದೇಶವು ನಿರಂಕುಶ ಹಾಗೂ ಕಾನೂನು ಬಾಹಿರವಾಗಿರುತ್ತದೆಂದು ಮೇಲ್ಮನವಿದಾರರು ಸಾಬೀತುಪಡಿಸಿರುತ್ತಾರೆಯೇ?

ii. ಏನು ಆದೇಶ?

11) ಈ ಕೆಳಕಂಡ ಕಾರಣಗಳಿಗಾಗಿ ಮೇಲ್ಕಂಡ ಅಂಶಗಳಿಗೆ ಈ ರೀತಿ ಉತ್ತರಿಸಿದ್ದೇನೆ.

i. **ಅಂಶ (i)** – ನಕಾರಾತ್ಮಕವಾಗಿ

ii. **ಅಂಶ (ii)** – ಕಡೆಯ ಆದೇಶದಂತೆ

## ಕಾರಣಗಳು

12) **ಅಂಶ (i):** ವಾದವಿವಾದದ ಸಮಯದಲ್ಲಿ ಅಪೀಲುದಾರರು ತಮ್ಮ ವಾದವನ್ನು ಮಂಡಿಸುತ್ತಾ ಗಂಗಾವತಿ ರಾಯಚೂರು ರೋಡ್‌ನಲ್ಲಿ ಇರುವಂತಹ ಮೆಸ್ಸರ್ಸ್ ಬಸವೇಶ್ವರ ಆಯಿಲ್ ಇಂಡಸ್ಟ್ರೀಸ್‌ನ ಮಾಲೀಕರು ತಾವಾಗಿರುತ್ತೇವೆಂದು, ಈ ಉದ್ಯಮಕ್ಕೆ 100KV ವಿದ್ಯುತ್ ಸಂಪರ್ಕವನ್ನು ಪಡೆದಿದ್ದೇವೆಂದು ವಿದ್ಯುತ್ ಸ್ಥಾವರ ಸಂಖ್ಯೆ GHT-80 ಆಗಿರುತ್ತದೆಂದು 2020ರ ಸಾಲಿನಲ್ಲಿ ಕೋವಿಡ್ ಸಾಂಕ್ರಾಮಿಕ ರೋಗದ ಕಾರಣದಿಂದ ತಮ್ಮ ಉದ್ಯಮವು ತೀವ್ರ ನಷ್ಟಕ್ಕೆ ಒಳಗಾಯಿತೆಂದು ಆದ್ದರಿಂದ ತಾವು 2021ರ ಸೆಪ್ಟೆಂಬರ್ ತಿಂಗಳಲ್ಲಿ 40KV ವಿದ್ಯುತನ್ನು ಕಡಿತಗೊಳಿಸಿ ತಮ್ಮ ಮಿಲ್ ಆವರಣದಲ್ಲಿಯೇ October 2021ರ ಸಾಲಲ್ಲಿ ಒಂದು ಸ್ವಿಮ್ಮಿಂಗ್ ಪೂಲ್

(swimming pool), ಡಾಬಾ ಹಾಗೂ ವೇ ಬ್ರಿಡ್ಜ್‌ನ್ನು ತಮ್ಮ ಉದ್ಯಮದ ಉಪಯೋಗಕ್ಕಾಗಿ ಅಳವಡಿಸಿಕೊಂಡು ಈ ಮೊದಲೇ ಉಂಟಾಗಿದ್ದ ನಷ್ಟವನ್ನು ಸರಿತೂಗಿಸಿಕೊಂಡು ಹೋಗುತ್ತಿದ್ದೆವೆಂದು, ಈ ರೀತಿ ಇರುವಾಗ್ಯೆ ಅಕ್ಟೋಬರ್ 2021ರ ಸಾಲಿನಲ್ಲಿ ಕೊಪ್ಪಳದ ಜೆಸ್ಕಾಂ ಸ್ಕ್ವಾಡ್‌ರವರು ತಮ್ಮ ಉದ್ಯಮಕ್ಕೆ ಭೇಟಿ ನೀಡಿ ತಾವು ಬಳಸಿದ ಒಟ್ಟು ವಿದ್ಯುತ್ತನ್ನು ವಾಣಿಜ್ಯ (commercial) ಎಂದು ಪರಿಗಣಿಸಿ ಮೂರು ತಿಂಗಳ ಹಿಂದಿನಿಂದ (ದಾಖಲೆ 1ರ ಅಡಿಯಲ್ಲಿ) ರೂ. 10,800/-ಗಳ ಹಿಂಬಾಕಿಯನ್ನು ಪಾವತಿ ಮಾಡುವಂತೆ ಸೂಚಿಸಿದ್ದರೆಂದು, ಈ ಬಗ್ಗೆ ತಾವು ದಿನಾಂಕ 14.12.2021 ಹಾಗೂ 24.12.2021ರಂದು ಗುಲ್ಬರ್ಗಾ ಜೆಸ್ಕಾಂ, ವ್ಯವಸ್ಥಾಪಕ ನಿರ್ದೇಶಕರವರಿಗೆ (Managing Director) ದಾಖಲೆ 2ರಲ್ಲಿ ನಮೂದು ಮಾಡಿದಂತೆ ಪತ್ರಗಳನ್ನು ಬರೆದು ತಮ್ಮ ಪರಿಸ್ಥಿತಿಯನ್ನು ವಿವರಿಸಿದ್ದೇವೆಂದು, ವ್ಯವಸ್ಥಾಪಕ ನಿರ್ದೇಶಕರವರು (Managing Director) ತಮ್ಮ ಈ ಎರಡೂ ಪತ್ರಗಳಿಗೆ ಸ್ಪಂದಿಸಿ ಗಂಗಾವತಿ, ಜೆಸ್ಕಾಂ ಕಛೇರಿಗೆ ಒಂದು ಪತ್ರ ಬರೆದು ಆ ಮೂಲಕ ಗ್ರಾಹಕರ ಅಹವಾಲನ್ನು ವಿಚಾರಿಸಿ ತಿರ್ಮಾನ ತಗೆದುಕೊಳ್ಳಲು ದಾಖಲೆ 3ರಂತೆ 30.12.2021ರಂದು ಒಂದು ಪತ್ರವನ್ನು ಬರೆದಿದ್ದರೆಂದು, ಇದರ ಅನ್ವಯ ಗಂಗಾವತಿ ಕಾರ್ಯಪಾಲಕ ಅಭಿಯಂತರರು ತಮ್ಮ ಸ್ಥಾವರಕ್ಕೆ ಬೇಟಿ ಕೊಟ್ಟು, ಮನವಿಯನ್ನು ಆಲಿಸಿ ತಮ್ಮ ಸ್ಥಾವರಕ್ಕೆ ಸಬ್ ಮೀಟರ್ (sub-meter) ಅಳವಡಿಸಿಕೊಳ್ಳಲು ಆದೇಶಿಸಿ ದಾಖಲೆ 4ರ ಅಡಿಯಲ್ಲಿ ದಿನಾಂಕ 08.02.2022ರಂದು ಪತ್ರವನ್ನು ಬರೆದಿದ್ದರೆಂದು, ಇವರ ಆದೇಶದಂತೆ ಸಬ್ ಮೀಟರ್‌ನ್ನು (sub-meter) ಅಳವಡಿಸಿಕೊಳ್ಳಲು ಗಂಗಾವತಿ, ಜೆಸ್ಕಾಂ ಕಛೇರಿಗೆ ದಿನಾಂಕ 17.02.2022ರಂದು ದಾಖಲೆ 5ರ ಅಡಿಯಲ್ಲಿ ತಾವು ಒಂದು ಅರ್ಜಿಯನ್ನು ಸಲ್ಲಿಸಿದ್ದೇವೆಂದು ಅದರಂತೆ ಗಂಗಾವತಿ, ಜೆಸ್ಕಾಂ, ಸಹಾಯಕ

ಕಾರ್ಯನಿರ್ವಾಹಕ ಇಂಜಿನಿಯರ್ (ವಿ)ರವರು ದಾಖಲೆ 6ರ ಅಡಿಯಲ್ಲಿ ಸಬ್ ಮೀಟರ್ (sub-meter) ಅಳವಡಿಸಿಕೊಳ್ಳಲು ಪರವಾನಗಿ ನೀಡಿದ್ದರೆಂದು ನುಡಿದಿರುತ್ತಾರೆ.

13) ಮತ್ತೆ ಮುಂದುವರೆದು ತಾವು ದಿನಾಂಕ 26.01.2022ರಂದು ಸಬ್ ಮೀಟರ್‌ನ್ನು (sub-meter) ಖರೀದಿ ಮಾಡಿದ್ದೇವೆಂದು ಸಂಪರ್ಕ ನೀಡಲು 25.02.2022ರಂದು ದಾಖಲೆ 8ರ ಅಡಿಯಲ್ಲಿ ಅರ್ಜಿಯನ್ನು ಕೊಟ್ಟಿದ್ದೇವೆಂದು, ಆಗ ಗುಲ್ಬರ್ಗಾ ಜೆಸ್ಕಾಂ, ವ್ಯವಸ್ಥಾಪಕ ನಿರ್ದೇಶಕರವರು (Managing Director) ದಿನಾಂಕ 30.12.2021ರಂದು ಗಂಗಾವತಿ ಕಾರ್ಯಪಾಲಕ ಅಭಿಯಂತರರಿಗೆ ಒಂದು ಪತ್ರವನ್ನು ಬರೆದು ತಾವು ಕೊಟ್ಟಿದ್ದ ದಿನಾಂಕ 25.02.2022ರ ಅರ್ಜಿಯನ್ನು ವಿಚಾರಣೆ ಮಾಡಿ ತೀರ್ಮಾನಿಸುವಂತೆ ತಿಳಿಸಿ ಒಂದು ಪತ್ರವನ್ನು ಕೂಡ ಬರೆದಿದ್ದರೆಂದು, ನಂತರ ತಾವು ಗಂಗಾವತಿ, ಜೆಸ್ಕಾಂ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)ರವರಿಗೆ ದಿನಾಂಕ 28.01.2022ರಂದು ದಾಖಲೆ 10ರಂತೆ ಒಂದು ಪತ್ರವನ್ನು ಬರೆದು ಗಂಗಾವತಿ, ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ಆದೇಶ ಕೊಡುವವರೆಗೆ ಯಾವುದೇ ಕ್ರಮ ಕೈಗೊಳ್ಳದಂತೆ ಹೆಚ್ಚಿನ ವಿದ್ಯುತ್ ಬಿಲ್ ಆಗಲೀ ದಂಡವಾಗಲೀ ವಿಧಿಸಬಾರದೆಂದು ಕೋರಿಕೊಂಡಿದ್ದೇವೆಂದು ಆದರೂ ಕೂಡ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)ರವರು ತಮ್ಮ ವಿದ್ಯುತ್ ಬಿಲ್ಲನ್ನು ವಾಣಿಜ್ಯ (commercial) ಎಂದು ಪರಿಗಣಿಸಿ, ಡಿಸೆಂಬರ್ 2021, ಜನವರಿ 2022 ಹಾಗೂ ಫೆಬ್ರುವರಿ 2022 ಅಂದರೇ ಒಟ್ಟು ಮೂರು ತಿಂಗಳ ಬಿಲ್ಲನ್ನು ದ್ವಿಗುಣಗೊಳಿಸಿ ಮತ್ತೊಂದು ಬಿಲ್ಲನ್ನು ನೀಡಿದ್ದರೆಂದು ಅದರಿಂದ ತಾವು ನೊಂದು ಎರಡನೇ ಎದುರುದಾರ ಗ್ರಾಹಕರ ಕುಂದು ಕೊರತೆಗಳ ನಿವಾರಣಾ ವೇದಿಕೆರವರ ಮುಂದೆ ದೂರು ಸಲ್ಲಿಸಿದ್ದೇವೆಂದು, ಆದರೇ ಸದರಿಯವರು

ದಾಖಲೆಗಳನ್ನು ಪರಿಶೀಲನೆ ಮಾಡದೆಯೇ ಅಂತಿಮ ಆದೇಶ ಹೊರಡಿಸಿರುತ್ತಾರೆಂದು ನುಡಿದಿರುತ್ತಾರೆ. ಮತ್ತೆ ಮುಂದುವರೆದು ತಾವು ಈ ಪ್ರಾಧಿಕಾರದ ಮುಂದೆ ಅಪೀಲನ್ನು ಸಲ್ಲಿಸಿ ಸಂಬಂಧಿತ ದಾಖಲಾತಿಗಳ ನಕಲುಗಳನ್ನು ಹಾಗೂ ದಿನಾಂಕ 29.06.2022ರ ಒಂದು ಪ್ರಮಾಣ ಪತ್ರವನ್ನು ಕೂಡ ಸಲ್ಲಿಸಿರುತ್ತೇವೆಂದು ತಾವು ಹಾಜರು ಪಡಿಸಿದ ಎಲ್ಲಾ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಎರಡನೇ ಎದುರುದಾರರು ಹೊರಡಿಸಿದ ಆದೇಶವನ್ನು ರದ್ದುಗೊಳಿಸಿ ಅಪೀಲನ್ನು ಪುರಸ್ಕರಿಸಬೇಕೆಂದು ಕೋರಿಕೊಂಡಿರುತ್ತಾರೆ.

14) ಒಂದನೇ ಎದುರುದಾರರು ವಾದವಿವಾದದ ಕಾಲದಲ್ಲಿ ತಮ್ಮ ವಾದವನ್ನು ಮಂಡಿಸುತ್ತಾ ಕೊಪ್ಪಳ, ಜೆಸ್ಕಾಂ, HT rating ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)ರವರು ಅರ್ಜಿದಾರರ ಸ್ಥಾವರದ ದೈನಂದಿನ ಮಾಪಕ ಪರಿಶೀಲನೆ ಮಾಡಿದಾಗ ಸದರಿ ಸ್ಥಾವರವು ಕೈಗಾರಿಕಾ ಉದ್ದೇಶಕ್ಕೆ ಬದಲಾಗಿ ವಾಣಿಜ್ಯ ಉದ್ದೇಶಕ್ಕೆ ಬಳಕೆ ಮಾಡುತ್ತಿದ್ದುದ್ದು ಕಂಡು ದಿನಾಂಕ 02.11.2021ರ ಪತ್ರ ಸಂಖ್ಯೆ GESCOM/AEE/HTRating/KPL-21-22/598-600 ಅಡಿಯಲ್ಲಿ ಒಂದು ವರದಿಯನ್ನು ಕೊಟ್ಟಿದ್ದರೆಂದು ಸದರಿ ವರದಿಯ ಆದಾರದ ಮೇರೆಗೆ ಗ್ರಾಹಕರಿಗೆ ಹಿಂಬಾಕಿ ಮೊತ್ತ ರೂ. 10,803/-ಗಳನ್ನು ಪಾವತಿ ಮಾಡುವಂತೆ ತಿಳಿಸಲಾಗಿತ್ತೆಂದು, ಆದರೇ, ಗ್ರಾಹಕರು ಈ ರೀತಿ ವಿಧಿಸಿರುವ ಹಿಂಬಾಕಿ ಮೊತ್ತವು ಕಾನೂನು ಬಾಹಿರ ಆಗಿರುತ್ತದೆಂದು ಹೇಳಿ ಕಲಬುರ್ಗಿ, ಜೆಸ್ಕಾಂ, Chief Engineerರವರಿಗೆ ವಿಚಾರಣೆ ಮಾಡಲು ಪತ್ರ ಬರೆದಿದ್ದರೆಂದು ಇದರ ಅನ್ವಯ ಕಲಬುರ್ಗಿ, ಜೆಸ್ಕಾಂ, ಮುಖ್ಯ ಅಭಿಯಂತರರು ದಿನಾಂಕ 30.12.2021ರ ಪತ್ರದ ಮೂಲಕ ಗಂಗಾವತಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)ರವರಿಗೆ ಸೂಕ್ತ ಕ್ರಮ

ಕೈಗೊಳ್ಳುವಂತೆ ಸೂಚಿಸಿದ್ದರೆಂದು ಇದರ ಅನುಸಾರವಾಗಿ ಸದರಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)ರವರು ಗ್ರಾಹಕರು ಡಾಬಾ ಮತ್ತು ವೇ ಬ್ರಿಡ್ಜ್‌ಗಳಿಗೆ 10KW ಮತ್ತು ಸ್ವಿಮ್ಮಿಂಗ್ ಪೂಲ್‌ಗೆ (swimming pool) ಪ್ರತ್ಯೇಕ ಮೀಟರನ್ನು ಅಳವಡಿಸಿಕೊಳ್ಳಲು ಅವಕಾಶ ಇರುವುದಿಲ್ಲವೆಂದು ಬದಲಾಗಿ ಸಬ್ ಮೀಟರ್‌ನ್ನು (sub-meter) ಅಳವಡಿಸಿಕೊಳ್ಳಬಹುದೆಂದು ತಿಳಿಸಲಾಗಿರುತ್ತದೆಂದು, ಆದರೇ ಗ್ರಾಹಕರು ಗ್ರಾಹಕರ ಕುಂದು ಕೊರತೆಗಳ ನಿವಾರಣಾ ವೇದಿಕೆರವರ ಮುಂದೆ ದೂರನ್ನು ಸಲ್ಲಿಸಿ ಒಂದನೇ ಎದುರುದಾರರು ನೀಡಿದ ದುಪ್ಪಟ್ಟು ಬಿಲ್ಲನ್ನು ರದ್ದುಗೊಳಿಸಲು ಮನವಿ ಮಾಡಿದ್ದರೆಂದು ತಾವು ಸಹ ಗ್ರಾಹಕರ ಕುಂದು ಕೊರತೆಗಳ ನಿವಾರಣಾ ವೇದಿಕೆರವರ ಮುಂದೆ ಹಾಜರಾಗಿ ಎಲ್ಲಾ ಮಾಹಿತಿಯನ್ನು ಸವಿಸ್ತಾರವಾಗಿ ಮಂಡಿಸಿದ್ದೆವೆಂದು, ಗ್ರಾಹಕರ ಕುಂದು ಕೊರತೆಗಳ ನಿವಾರಣಾ ವೇದಿಕೆರವರು ಉಭಯ ಪಕ್ಷಕಾರರ ವಾದವಿವಾದಗಳನ್ನು ಆಲಿಸಿ 08.06.2022ರಂದು ಅಂತಿಮ ಆದೇಶ ಹೊರಡಿಸಿದ್ದರೆಂದು ಈ ಆದೇಶದ ಅನ್ವಯ ತಾವು ಮತ್ತೊಂದು ಪತ್ರವನ್ನು ಗ್ರಾಹಕರಿಗೆ ಬರೆದಿರುತ್ತೇವೆಂದು ಆದರೇ ಸದರಿ ಗ್ರಾಹಕರು ಈ ಪ್ರಾಧಿಕಾರದ ಮುಂದೆ ಅಪೀಲು ಸಲ್ಲಿಸಿರುತ್ತಾರೆಂದು ನುಡಿದಿರುತ್ತಾರೆ. ಮತ್ತೆ ಮುಂದುವರೆದು ಗ್ರಾಹಕರು ಕೈಗಾರಿಕಾ ಉದ್ದೇಶಕ್ಕಾಗಿ ತಮಗೆ ನೀಡಿದ ಸ್ಥಾವರವನ್ನು ದುರ್ಬಳಕೆ ಮಾಡಿಕೊಂಡು ವಾಣಿಜ್ಯ ಉದ್ದೇಶಕ್ಕೆ ಬಳಸಿಕೊಂಡಿರುತ್ತಾರೆಂದು, ಸದರಿಯವರು ಬಳಕೆ ಮಾಡಿದ ವಿದ್ಯುತ್‌ಗೆ ಸಂಬಂಧಿಸಿದ HT Rating ಪ್ರಕಾರ ತಾವು ಹಿಂಬಾಕಿ ಬಿಲ್ಲನ್ನು ಕ್ಲಾಸ್ 42.02ರ Conditions of Supply of Electricity of Distribution Licensees in the State of Karnataka, ಅಡಿಯಲ್ಲಿ ನೀಡಿರುತ್ತೇವೆಯೇ ಹೊರತು ಬೇರೆ ಇನ್ಯಾವುದೇ ದಂಡ ವಿಧಿಸಿಲ್ಲವೆಂದು,

ಆದರೇ ಗ್ರಾಹಕರು ಇವೆಲ್ಲವನ್ನು ಅರಿತಿದ್ದರೂ ಸಹ ಬಿಲ್ಲಿನ ಹಣ ಪಾವತಿ ಮಾಡದೇ ಅಪೀಲನ್ನು ಸಲ್ಲಿಸಿರುತ್ತಾರೆಂದು, ಎರಡನೇ ಎದುರುದಾರರು ಹೊರಡಿಸಿರುವ ಪ್ರಶ್ನಿತ ಆದೇಶವು ನ್ಯಾಯೋಚಿತವಾಗಿದೆಯೆಂದು. ಆದ್ದರಿಂದ ಪ್ರಸ್ತುತ ಅಪೀಲು ಊರ್ಜಿತ ಆಗುವುದಿಲ್ಲವೆಂದು ಆದ ಕಾರಣ ಅಪೀಲನ್ನು ವಜಾ ಮಾಡುವಂತೆ ಕೋರಿಕೊಂಡಿರುತ್ತಾರೆ.

15) ಅಪೀಲುದಾರರು ತಮ್ಮ ಮೇಲ್ಮನವಿಯೊಂದಿಗೆ ಈ ಕೆಳಕಂಡ ದಾಖಲೆಗಳ ಜೆರಾಕ್ಸ್ ನಕಲುಗಳನ್ನು ಹಾಜರುಪಡಿಸಿರುತ್ತಾರೆ: -

a) ದಿನಾಂಕ 20.11.2021ರಂದು ಜೆಸ್ಕಾಂ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)ರವರು ಅಪೀಲುದಾರರಿಗೆ ಬರೆದ ಪತ್ರದ ನಕಲು ಹಾಗೂ ವಿವರಗಳ ಎರಡು ಪುಟಗಳು.
b) ದಿನಾಂಕ 14.12.2021 ಹಾಗೂ 24.12.2021ರಂದು ಅಪೀಲುದಾರರು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), MT ಜೆಸ್ಕಾಂ ರವರಿಗೆ ಬರೆದ ಪತ್ರದ ನಕಲುಗಳು ಹಾಗೂ ವಿವರಗಳ ಒಂದು ಪುಟ.
c) ದಿನಾಂಕ 30.12.2021ರಂದು ಮುಖ್ಯ ಅಭಿಯಂತರರು, ಜೆಸ್ಕಾಂ, ಕಲಬುರ್ಗಿರವರು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಜೆಸ್ಕಾಂ ಗಂಗಾವತಿರವರಿಗೆ ಬರೆದ ಪತ್ರದ ನಕಲು.
d) ಅಪೀಲುದಾರರು ದಿನಾಂಕ 28.01.2022ರಂದು 3 Phase ಮೀಟರ್‌ನ್ನು ಖರೀದಿಸಿದ ಬಗ್ಗೆ Tax Invoice ದಾಖಲಾತಿ ನಕಲು.
e) ದಿನಾಂಕ 28.01.2022ರಂದು ಅರ್ಜಿದಾರರು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಜೆಸ್ಕಾಂ ಗಂಗಾವತಿರವರಿಗೆ ಬರೆದ ಪತ್ರದ ನಕಲು.
f) ದಿನಾಂಕ 08.02.2022ರಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಜೆಸ್ಕಾಂ ಗಂಗಾವತಿರವರು ಅಪೀಲುದಾರರಿಗೆ ಬರೆದ ಪತ್ರದ ನಕಲು.
g) ದಿನಾಂಕ 17.02.2022ರಂದು ಅಪೀಲುದಾರರು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಜೆಸ್ಕಾಂ ಗಂಗಾವತಿರವರಿಗೆ ಒಂದು ಸಬ್ ಮೀಟರ್ (sub-meter) ಹಾಗೂ 5KV ಮೀಟರನ್ನು ಅಳವಡಿಸಿ ಕೋರಿ ಬರೆದ ಪತ್ರದ ನಕಲು.
h) ದಿನಾಂಕ 22.02.2022ರಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಜೆಸ್ಕಾಂ ಗಂಗಾವತಿರವರು ಅಪೀಲುದಾರರಿಗೆ ಬರೆದ ಪತ್ರದ ನಕಲು.
i) ದಿನಾಂಕ 25.02.2022ರಂದು ಅಪೀಲುದಾರರು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಜೆಸ್ಕಾಂ ಗಂಗಾವತಿರವರಿಗೆ ಬರೆದ ಪತ್ರದ ನಕಲು.
j) ದಿನಾಂಕ 10.03.2022ರಂದು ಗ್ರಾಹಕರ ಕುಂದು ಕೊರತೆಗಳ ನಿವಾರಣಾ ವೇದಿಕೆರವರಿಗೆ ಕೊಟ್ಟ ದೂರು ಹಾಗೂ Form ‘A’ ನಕಲು.

k) ದಿನಾಂಕ 08.06.2022ರಂದು ಗ್ರಾಹಕರ ಕುಂದು ಕೊರತೆಗಳ ನಿವಾರಣಾ ವೇದಿಕೆರವರು ನೀಡಿದ ಆದೇಶದ ನಕಲು ಹಾಗೂ ಪರಿಷ್ಕೃತ ಬಿಲ್‌ನ ನಕಲು.
l) ದಿನಾಂಕ 29.06.2022ರ ಅಪೀಲುದಾರರ ಪ್ರಮಾಣ ಪತ್ರ.

16) ಒಂದನೇ ಎದುರದಾರರು/ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)ರವರು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

17) ಉಭಯಪಕ್ಷಕಾರರ ವಾದವಿವಾದಗಳನ್ನು ಆಲಿಸಿ ಅಪೀಲುದಾರರು ಹಾಜರುಪಡಿಸಿದ ದಾಖಲಾತಿಗಳನ್ನು ಪರಿಶೀಲಿಸಿರುತ್ತೇನೆ. ಈ ಸಂದರ್ಭದಲ್ಲಿ ಕಂಡುಬರುವುದೇನೆಂದರೇ, ಅಪೀಲುದಾರರು ಆರ್ ಆರ್ ಸಂಖ್ಯೆ GHT-80 ಸ್ಥಾವರವನ್ನು ಹೊಂದಿರುವ ಗ್ರಾಹಕರೆಂದು, ಇದನ್ನು ಶ್ರೀ ಬಸವೇಶ್ವರ ಆಯಿಲ್ ಇಂಡಸ್ಟ್ರೀಸ್ ಎಂಬ ಉದ್ಯಮ ನಡೆಸಲು ಜೆಸ್ಕಾಂನಿಂದ ವಿದ್ಯುತ್ ಸಂಪರ್ಕ ಪಡೆದುಕೊಂಡಿದ್ದರೆಂದು, ತದನಂತರ October 2021ರ ಸಾಲಿನಲ್ಲಿ ತಮ್ಮ ಮಿಲ್ ಆವರಣದಲ್ಲಿ ಒಂದು ಸ್ವಿಮ್ಮಿಂಗ್ ಪೂಲ್ (swimming pool), ಡಾಬಾ ಹಾಗೂ ವೇ ಬ್ರಿಡ್ಜನ್ನು ಅಳವಡಿಸಿಕೊಂಡು ಆರ್ ಆರ್ ಸಂಖ್ಯೆ GHT-80ರ ಸ್ಥಾವರದ ಮೂಲಕವೇ ವಿದ್ಯುತ್ ಬಳಕೆ ಮಾಡುತ್ತಿದ್ದರು ಎಂಬುವುದರಲ್ಲಿ ಯಾವುದೇ ವಿವಾದ ಇರುವುದಿಲ್ಲ. ಇದಕ್ಕೆ ಸಂಬಂಧಪಟ್ಟಂತೆ ಸ್ವತಃ ಅಪೀಲುದಾರರೇ ನೋಟರಿರವರ ಮುಂದೆ ಸತ್ಯಾಪನೆ ಮಾಡಿ ಒಂದು ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತಾರೆ. ಸದರಿ ಪ್ರಮಾಣ ಪತ್ರದಲ್ಲಿ ಆಯಿಲ್ ಮಿಲ್‌ಗಾಗಿ ವಿದ್ಯುತ್ತನ್ನು ಹಾಕಿಸಿಕೊಂಡಿರುತ್ತೇನೆಂದು ಇದಕ್ಕೆ ಸಂಬಂಧಿಸಿದಂತೆ ಆರ್ ಆರ್ ಸಂಖ್ಯೆ GHT-80 ಆಗಿರುತ್ತದೆಂದು ಪ್ರತಿ ತಿಂಗಳು ಬಿಲ್ಲನ್ನು ಪಾವತಿ ಕೂಡ ಮಾಡುತ್ತಿರುತ್ತೇನೆಂದು, ಆಯಿಲ್ ಮಿಲ್ ಇರುವ ಜಾಗದಲ್ಲಿಯೇ ಸ್ವಿಮ್ಮಿಂಗ್ ಪೂಲ್ (swimming pool), ಡಾಬಾ ಹಾಗೂ ವೇ ಬ್ರಿಡ್ಜ್‌ನ್ನು ಹಾಕಿಕೊಂಡು

ಅಕ್ಟೋಬರ್ 2021ರಲ್ಲಿ ಇವುಗಳನ್ನು ಪ್ರಾರಂಭಿಸಿ ಈಗಾಗಲೇ ತಾವು ಪಡೆದುಕೊಂಡಿದ್ದ ವಿದ್ಯುತ್ತನ್ನು ಸ್ವಿಮ್ಮಿಂಗ್ ಪೂಲ್ (swimming pool), ಡಾಬಾ ಹಾಗೂ ಆಯಿಲ್ ಮಿಲ್ ಇವುಗಳಿಗೆ ಬಳಸಿಕೊಳ್ಳುತ್ತಿರುವುದಾಗಿ ಸ್ವತಃ ನುಡಿದಿರುತ್ತಾರೆ.

18) ಅಪೀಲುದಾರರು ಹಾಜರು ಪಡಿಸಿದ ದಿನಾಂಕ 20.11.2021ರ ಪತ್ರವನ್ನು ಪರಿಶೀಲಿಸಿದಾಗ ಗಂಗಾವತಿ, ಜೆಸ್ಕಾಂ, ಕಾರ್ಯ ಮತ್ತು ಪಾಲನ ಉಪವಿಭಾಗದ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)ರವರು ದಿನಾಂಕ 27.10.2021ರಂದು ಕೊಪ್ಪಳ ಜೆಸ್ಕಾಂ, HT Rating ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)ರವರು GHT-80 ಸ್ಥಾವರ ಪರಿಶೀಲನೆ ಮಾಡಿದ್ದರೆಂದು, ನಂತರ ರೂ. 10,803/-ಗಳ ಹಿಂಬಾಕಿಯನ್ನು ವಿಧಿಸಿರುತ್ತಾರೆಂದು, ಇದನ್ನು ಪಾವತಿ ಮಾಡಬೇಕಾಗಿರುತ್ತದೆಂದು ತಿಳಿಸಿ ಅಪೀಲುದಾರರಿಗೆ ಪತ್ರ ಬರೆದಿರುವುದು ಕಂಡು ಬರುತ್ತದೆ. ಈ ಪತ್ರದೊಂದಿಗೆ 12.11.2021ರಂದು ಕೊಪ್ಪಳ ಜೆಸ್ಕಾಂ, HT Rating ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)ರವರು ಕರಟಗಿ, ಜೆಸ್ಕಾಂ, ಕಾರ್ಯ ಮತ್ತು ಪಾಲನ ಉಪವಿಭಾಗದ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)ರವರಿಗೆ ಒಂದು ಪತ್ರವನ್ನು ಬರೆದು ಆ ಮೂಲಕ ಆರ್ ಆರ್ ನಂ. GHT-80 ಈ ಸ್ಥಾವರಕ್ಕೆ ನೀಡಲಾದ ಜಕಾತಿಯನ್ನು ಬದಲಾವಣೆ ಮಾಡಿ ವಿದ್ಯುತ್ ಉಪಯೋಗ ಮಾಡುತ್ತಿರುತ್ತಾರೆಂದು, ಆದ್ದರಿಂದ ಹಿಂಬಾಕಿ ಮೊತ್ತ ರೂ. 10,803/-ಗಳನ್ನು ಮುಂಬರುವ ಮಾಸಿಕ ವಿದ್ಯುತ್ ಬಿಲ್ಲಿನಲ್ಲಿ ಕ್ಲೈಮ್ ಮಾಡಬೇಕೆಂದು ತಿಳಿಸಿರುವುದು ಕಂಡು ಬರುತ್ತದೆ ಹಾಗೂ ಕೊಪ್ಪಳ HT Rating sub-division, ಜೆಸ್ಕಾಂ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)ರವರು GHT-80 ಸ್ಥಾವರಕ್ಕೆ ಸಂಬಂಧಿಸಿದ ಸ್ಟೇಟ್‌ಮೆಂಟ್‌ನ

(statement) ನಕಲನ್ನು ಕೂಡ ನೀಡಿದ್ದು ಇದರ ಪ್ರಕಾರ “the electricity is being used for commercial purpose instead of industrial” ಎಂಬುದಾಗಿ “remarks column”ನಲ್ಲಿ ನಮೂದು ಮಾಡಿರುವುದು ಕಂಡುಬರುತ್ತದೆ.

19) ಅಪೀಲುದಾರರು ಹಾಜರುಪಡಿಸಿದ ದಿನಾಂಕ 14.12.2021 ಹಾಗೂ 24.12.2021ರ ಪತ್ರಗಳನ್ನು ಪರಿಶೀಲಿಸಿದಾಗ ತಾವು ಈಗಾಗಲೇ ಪಡೆದಿದ್ದ ವಿದ್ಯುತ್ತನ್ನು ಈಜುಕೊಳ ಹಾಗೂ ಡಾಬಾಗೆ ಬಳಕೆ ಮಾಡುತ್ತಿರುವುದಾಗಿ ಒಪ್ಪಿ ನುಡಿದಿರುವುದು ಕಂಡುಬರುತ್ತದೆ. ದಿನಾಂಕ 30.12.2021ರ ಪತ್ರವನ್ನು ಪರಿಶೀಲನೆ ಮಾಡಿದಾಗ ಕಲಬುರ್ಗಿ, ಜೆಸ್ಕಾಂ, ಮುಖ್ಯ ಅಭಿಯಂತರರು ಗಂಗಾವತಿ ಜೆಸ್ಕಾಂ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)ರವರಿಗೆ ಪತ್ರವನ್ನು ಬರೆದು ಆ ಮೂಲಕ ಮೆಸ್ಸರ್ಸ್ ಬಸವೇಶ್ವರ ಆಯಿಲ್ ಇಂಡಸ್ಟ್ರೀಸ್ ಗಂಗಾವತಿ ಇದರ ಮಾಲೀಕರು ಸ್ವಿಮ್ಮಿಂಗ್ ಪೂಲ್ (swimming pool) ಮತ್ತು ಡಾಬಾಗೆ ವಿದ್ಯುತ್ ದುರ್ಬಳಕೆ ಮಾಡಲಾಗಿದೆ ಎಂದು ತಿಳಿಸಿ ಇವರ ಸ್ಥಾವರಕ್ಕೆ ವಿಧಿಸಿರುವ ಬಿಲ್ಲು ಕಾಯ್ದೆ ಬಾಹಿರವಾಗಿದೆ ಎಂಬುದಾಗಿ ಮನವಿ ಸಲ್ಲಿಸಿರುತ್ತಾರೆಂದು ಈ ಬಗ್ಗೆ ಪರಿಶೀಲಿಸಿ ಚಾಲ್ತಿಯಲ್ಲಿರುವ ನಿಗಮದ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಮತ್ತು ವರದಿಯನ್ನು ಸಲ್ಲಿಸಬೇಕೆಂದು ಸೂಚಿಸಿರುವುದು ಕಂಡುಬರುತ್ತದೆ. ದಿನಾಂಕ 08.02.2022ರ ಪತ್ರವನ್ನು ಪರಿಶೀಲನೆ ಮಾಡಿದಾಗ ಗಂಗಾವತಿ ಜೆಸ್ಕಂ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)ರವರು ಅಪೀಲುದಾರರಿಗೆ ಪತ್ರವನ್ನು ಬರೆಯುತ್ತಾ ಕಲಬುರ್ಗಿ, ಜೆಸ್ಕಾಂ, ಮುಖ್ಯ ಅಭಿಯಂತರರ ದಿನಾಂಕ 30.12.2021ರ ಪತ್ರದ ಮೇರೆಗೆ ತಾವು ಕ್ರಮ ಕೈಗೊಂಡಿದ್ದೇವೆಂದು ಈ ಬಗ್ಗೆ ಪರಿಶೀಲನೆ ಮಾಡಲಾಗಿ GHT-80 ಸ್ಥಾವರಕ್ಕೆ ನೀಡಲಾಗಿರುವ ವಿದ್ಯುತ್ತನ್ನು ಉದ್ಯಮಕ್ಕೆ ಈಜುಕೊಳ ಹಾಗೂ ಡಾಬಾಗೆ ಬಳಕೆ ಮಾಡುತ್ತಿರುವುದಾಗಿ

ಗ್ರಾಹಕರೇ ತಿಳಿಸಿರುವ ಮೇರೆಗೆ ಕೈಗಾರಿಕಾ ಬಳಕೆಗಾಗಿ HT ವಿದ್ಯುತ್ ಸಂಪರ್ಕವನ್ನು ಪಡೆದುಕೊಂಡು ವಾಣಿಜ್ಯ ಬಳಕೆಗೆ ವಿದ್ಯುತ್ ಬಳಕೆ ಮಾಡುತ್ತಿರುವುದು ನಿಗಮದ ನಿಯಮದ ಬಾಹಿರವಾಗಿರುತ್ತದೆಂದು ಆದ್ದರಿಂದ ಕೊಪ್ಪಳ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), HT Rating ಉಪವಿಭಾಗ ರವರು ವಿಧಿಸಿರುವ ಮೊತ್ತ ಸರಿಯಾಗಿದ್ದು ಅದನ್ನು ಪಾವತಿಸಬೇಕಾಗಿರುತ್ತದೆಂದು ಅಷ್ಟೇ ಅಲ್ಲದೇ ಕೈಗಾರಿಕಾ ಬಳಕೆಗಾಗಿ ಪಡೆದುಕೊಂಡಿರುವ ವಿದ್ಯುತ್ತನ್ನು ವಾಣಿಜ್ಯ ಬಳಕೆಗಾಗಿ ಜಕಾತಿ ಬದಲಾವಣೆ ಮಾಡಿಕೊಳ್ಳಲು ತಪ್ಪಿದ್ದಲ್ಲಿ ನಿಯಮಾನುಸಾರ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿರುವುದು ಕಂಡು ಬರುತ್ತದೆ.

20) ದಿನಾಂಕ 17.02.2022ರ ಪತ್ರವನ್ನು ಪರಿಶೀಲನೆ ಮಾಡಿದಾಗ ಅಪೀಲುದಾರರು ಈ ಪತ್ರವನ್ನು ಕಾರ್ಯನಿರ್ವಾಹಕ ಇಂಜಿನಿಯರ್ (ವಿ)ರವರಿಗೆ ಬರೆದಿದ್ದು ಡಾಬಾ ಮತ್ತು ವೇ ಬ್ರಿಡ್ಜ್‌ಗಾಗಿ 10KV ವಿದ್ಯುತ್ ಅವಶ್ಯವಿರುತ್ತದೆಂದು ಇವುಗಳಿಗೆ ಒಂದು ಸಬ್ ಮೀಟರ್ ವಾಣಿಜ್ಯ (sub-meter commercial) ಹಾಗೂ ಸ್ವಿಮ್ಮಿಂಗ್ ಪೂಲ್‌ಗೆ (swimming pool) 5KV ಕ್ರೀಡೆಯಡಿಯಲ್ಲಿ ಮೀಟರನ್ನು ಅಳವಡಿಸಿಕೊಳ್ಳಲು ಅನುಮತಿ ನೀಡಬೇಕೆಂದು ಕೋರಿಕೊಂಡಿರುವುದು ಕಂಡುಬರುತ್ತದೆ. ಈ ಪತ್ರಕ್ಕೆ ಪ್ರತ್ಯುತ್ತರ ನೀಡುತ್ತಾ ಗಂಗಾವತಿ, ಜೆಸ್ಕಾಂ, ಕಾರ್ಯ ಮತ್ತು ಪಾಲನ ಉಪವಿಭಾಗದ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)ರವರು ಅಪೀಲುದಾರರಿಗೆ ಉತ್ತರಿಸಿದ್ದು ಡಾಬಾ ಮತ್ತು ವೇ ಬ್ರಿಡ್ಜ್ ಹಾಗೂ ಸ್ವಿಮ್ಮಿಂಗ್ ಪೂಲ್‌ಗೆ (swimming pool) ಪ್ರತ್ಯೇಕವಾಗಿ ಮೀಟರನ್ನು ಅಳವಡಿಸಲು ಅವಕಾಶವಿಲ್ಲವೆಂದು ಈ ಮೂರಕ್ಕೂ ಒಂದು ಸಂಖ್ಯೆಯ ವಾಣಿಜ್ಯ ಬಳಕೆಯ ಮೀಟರನ್ನು ನೀಡಲು ಅವಕಾಶ ಇರುತ್ತದೆಂದು ಆದ್ದರಿಂದ ಅಗತ್ಯವಿರುವ ಕಿ.ವ್ಯಾ ವಿದ್ಯುತ್ತನ್ನು

ನಿಯಮಾನುಸಾರ ಪಡೆಯಲು ತಿಳಿಸಲಾಗಿದೆ ಎಂಬುದಾಗಿ ನುಡಿದಿರುವುದು ಕಂಡುಬರುತ್ತದೆ. ಈ ಯಾವುದೇ ದಾಖಲಾತಿಗಳ ಅಂಶಗಳನ್ನು ಯಾವುದೇ ಪಕ್ಷಕಾರರು ಅಲ್ಲಗೆಳೆದಿರುವುದಿಲ್ಲ.

21) ಈ ಹಂತದಲ್ಲಿ ಮಾನ್ಯ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣಾ ಆಯೋಗದವರು ಹೊರಡಿಸಿದ Tariff Order 2021 of GESCOMನ ಪುಟ ಸಂಖ್ಯೆ 328 ರಿಂದ 330ಗಳನ್ನು ಪರಿಶೀಲಿಸಿರುತ್ತೇನೆ, ಅದು ಈ ಕೆಳಗಿನಂತಿರುತ್ತದೆ: -

*<u>TARIFF SCHEDULE HT-2(a)</u>*

*Applicable to Industries, Factories, Industrial Workshops, Research & Development Centres, Industrial Estates, Milk dairies, Rice Mills, Phava Mills, roller Flour Mills, News Papers, Printing Press, Railway Workshops/KSRTC Workshops/ Depots, Crematoriums, Cold Storage, Ice & Ice-cream mfg. Units, Swimming Pools of local bodies, Water supply Installations of KIADB and other industries, all Defense Establishments, Hatcheries, Poultry Farm, Museum, Floriculture, Green House, Bio Technical Laboratory, Hybrid Seeds processing Units, Stone Crushers, Stone cutting, Bakery Product Manufacturing Units, Mysore Palace Illumination, Film Studios, Dubbing Theatres, Processing, Printing, Developing and Recording Theatres, Tissue Culture, Aqua Culture, Prawn Culture, Information Technology Industries engaged in development of Hardware & Software, Information Technology (IT) enabled Services / Start-ups (As defined in GOI notification dated 17.04.2015)/Animation/Gaming/Computer Graphics as certified by the IT & BT Department of GOK/GOI, Drug Mfg. Units Garment Mfg. Units, Tyre retreading units, Nuclear Power Projects, Stadiums maintained by Government and*

*local bodies, Railway Traction, Effluent treatment plants and Drainage water treatment plant owned other than by the local bodies independently serviced outside the premises of industries/ Building for which the HT power supply is availed, LPG bottling plants, petroleum pipeline projects, Piggery farms, Analytical Lab for analysis of ore metals, Saw Mills, Toy/wood industries, Satellite communication centres, Mineral water processing plants/drinking water bottling plants and Solid Waste Processing Plant.*

## *RATE SCHEDULE*

### *HT-2(a): Applicable to all areas of GESCOM*

| | |
|---|---|
| ***Demand Charges*** | *Rs. 240/kVA of billing demand/month* |
| ***Energy Charges*** | |
| *For the First one lakh units* | *730 paise per unit* |
| *For the balance units* | *755 paise per unit* |

### *Tariff applicable to Railway Traction*

| | |
|---|---|
| ***Demand Charges*** | *Rs. 250/kVA of billing demand/month* |
| ***Energy Charges*** | *655 paise per unit for all the units* |

***Note: special Incentive Scheme & ToD Tariff is not applicable to Railway traction installations.***

### *Tariff applicable to Effluent Plants independently serviced outside the premises of any installations under HT2 (a)*

| | |
|---|---|
| ***Demand Charges*** | *Rs. 250/kVA of billing demand/ month* |
| ***Energy Charges*** | *695 paise per unit for all the units* |

***Note: The ToD tariff is applicable to these installations if the Special incentive scheme is not opted.***

## ***<u>TARIFF SCHEDULE HT-2(b)</u>***

*Applicable to Commercial Complexes, Cinemas, Hotels, Boarding & Lodging, Amusement Parks, Telephone Exchanges, Race Course, All Clubs, T.V. Station, all India Radio, Railway Stations, Air Port, KSRTC bus stations, All offices, Banks, Commercial Multi-stories buildings. APMC Yards, Stadiums other than those maintained by Government and Local Bodies, Construction power for irrigation, Power Projects and Konkan Railway Project, Petrol/Diesel and Oil storage plants, I.T. based medical transcription centres, telecom, call centres, BPO/KPOO. Diagnostic centres, concrete mixture (Ready Mix Concrete) units and Private Guest Houses / Travelers Bunglows.*

***All the activities listed under LT3 tariff schedule and not included under HT2(b) tariff schedule shall be classified under HT-2(b), if they avail power under HT supply.***

### ***RATE SCHEDULE***

### ***HT-2(b): Applicable to all areas of GESCOM***

| | |
|---|---|
| ***Demand Charges*** | *Rs. 260/kVA of billing demand/month* |
| ***Energy Charges*** | |
| *For the First one lakh units* | *900 paise per unit* |
| *For the balance units* | *910 paise per unit* |

ಮೇಲ್ಕಂಡ ಜಕಾತಿಯನ್ನು ಪರಿಶೀಲನೆ ಮಾಡಿದಾಗ ಶ್ರೀ ಬಸವೇಶ್ವರ ಆಯಿಲ್ ಇಂಡಸ್ಟ್ರೀಸ್ HT-2(a) ಅಡಿಯಲ್ಲಿ ಬರುವಂತಹ ಕೈಗಾರಿಕೋದ್ಯಮ ಆಗಿದ್ದು ತದನಂತರ ಅಪೀಲುದಾರರು ನಡೆಸುತ್ತಿರುವ ವೇ ಬ್ರಿಡ್ಜ್, ಸ್ವಿಮ್ಮಿಂಗ್ ಪೂಲ್‌ಗೆ (swimming pool) ಹಾಗೂ ಡಾಬಾ ಇವುಗಳು HT-2(b) ಜಕಾತಿ ಅಡಿಯಲ್ಲಿ ಬರುವಂತಹ ವಾಣಿಜ್ಯೋದ್ಯಮಗಳು ಆಗಿರುತ್ತವೆ. ಆದ್ದರಿಂದ

ಅಪೀಲುದಾರರು ತಾವೇ ಸತಃ ನುಡಿದಂತೆ ಅಕ್ಟೋಬರ್ 2021ರಿಂದ ತಾವು ನಡೆಸುತ್ತಿದ್ದ ವಾಣಿಜ್ಯೋದ್ಯಮಗಳಿಗೆ ವಿದ್ಯುತ್ ಬಳಕೆ ಮಾಡಿಕೊಂಡಿರುವುದರಿಂದ HT-2(b) ಜಕಾತಿ ಅಡಿಯಲ್ಲಿ ವಿದ್ಯುತ್ ಬಿಲ್ಲನ್ನು ಪಾವತಿಸಬೇಕಾಗಿರುತ್ತದೆ.

22) Conditions of Supply of Electricity of the Distributions Licensees in the State of Karnatakaರಲ್ಲಿನ Clause 42.02ನ್ನು ಪರಿಶೀಲಿಸಿದ್ದೇನೆ ಅದು ಈ ಕೆಳಗಿನಂತಿರುತ್ತದೆ:

***42.02 MISUSE OF ELECTRICITY***

*(Applicate to both HT and LT. Installations)*

*(a) If at any time, energy supplied under one method of charging is misused for purpose for which a higher method of charging is in force, the Assessing officer shall asses the quantum of energy and difference in fixed charges for the entire period during which such unauthorized use of electricity has taken place and if, however, the period during which such unauthorized use of electricity has taken place cannot be ascertained, such period shall be limited to a period of 12 months immediately preceding the date of inspection and charge at two times the Tariff applicable to the purpose for which the energy is misused.*

*The Consumer shall pay such amount within thirty days from the date of claim, failing which, the installation is liable for disconnection and such amount shall be deemed to be arrears of electricity charges.*

***Note:*** *1) If the Assessing officer arrives at the conclusion that unauthorized use of electricity has taken, the assessment shall be made for the entire period during which such unauthorized use of electricity has taken and if, however, the period during which such unauthorized use of electricity has taken cannot be ascertained such period shall be limited to a period of 12 months immediately preceding the date of inspection.*

*2) The basis of assessing the period and the quantum of energy misused shall be recorded by the Assessing officer, and*

*intimated to the Consumer. The Consumer shall be given an opportunity to verify the basis of assessing the period and quantum of energy misused and represent on the computed consumption.*

*(b) From the date of detection till such time the misuse is discontinued and reported by the Consumer to the Licensee in writing or the loads are suitable bifurcated by complying with the relevant requirements of the Licensee, the higher Tariff shall be applicable at two times as per Amendment vide Notification No. K.E.R.C./COS/D/07/08 Dated: 14.3.2008 published in Karnataka Gazette dated: 20.3.2008 (Old version: one and half times) the Tariff applicable on the proportionate consumption and Demand charges/Fixed charges of the installation. The entitlement shall be revised as applicable, to the higher Tariff in case of period of power cut.*

*The misuse shall be regularized within 3 months, failing which, power supply to the installation shall be liable to be disconnected.*

ಈ ಮೇಲಿನ ಕಂಡಿಕೆಯ ಪ್ರಕಾರ ಯಾವುದೇ ಗ್ರಾಹಕನು ಯಾವುದೇ ಸಮಯದಲ್ಲಿ, ಒಂದು ಕಡಿಮೆ ದರದ ಜಕಾತಿಯ ಅಡಿಯಲ್ಲಿ ಸರಬರಾಜು ಮಾಡಲಾಗುತ್ತಿದ್ದ ವಿದ್ಯುಚ್ಛಕ್ತಿಯನ್ನು ದುರುಪಯೋಗಪಡಿಸಿಕೊಂಡು ಹೆಚ್ಚಿನ ದರದ ಜಕಾತಿಯಲ್ಲಿನ ಉದ್ದೇಶಕ್ಕಾಗಿ ಬಳಸಿಕೊಂಡರೇ ಅಂತಹ ಸಂದರ್ಭದಲ್ಲಿ, ಮೌಲ್ಯಮಾಪನ ಅಧಿಕಾರಿಯು ಆ ರೀತಿ ಬಳಸಿಕೊಂಡಂತಹ ವಿದ್ಯುಚ್ಛಕ್ತಿಯ ಪ್ರಮಾಣವನ್ನು ನಿರ್ಣಯಿಸಬೇಕು ಹಾಗೂ ಅಂತಹ ಅನಧಿಕೃತ ವಿದ್ಯುತ್ ಬಳಕೆಯ ಸಂಪೂರ್ಣ ಅವಧಿಗೆ ನಿಗಧಿತ ಶುಲ್ಕಗಳಲ್ಲಿನ ವ್ಯತ್ಯಾಸವನ್ನು ಕಂಡುಹಿಡಿಯಬೇಕು, ಒಂದು ವೇಳೆ ಅಂತಹ ಅನಧಿಕೃತ ವಿದ್ಯುತ್ ಬಳಕೆಯ ಅವಧಿಯನ್ನು ಕಂಡುಹಿಡಿಯಲಾಗದಿದ್ದರೆ, ಸದರಿ ಅವಧಿಯು ಹಿಂದಿನ 12 ತಿಂಗಳ ಅವಧಿಗೆ ಸೀಮಿತವಾಗಿರುತ್ತದೆ ಹಾಗೂ ದುರುಪಯೋಗ ಪಡಿಸಿಕೊಳ್ಳುವ ಉದ್ದೇಶದಿಂದ ಬಳಸಿಕೊಳ್ಳಲಾದ ವಿದ್ಯುತ್ ಬಳಕೆಗೆ ಅನ್ವಯಿಸುವಂತೆ ಎರಡು ಪಟ್ಟು ಶುಲ್ಕವನ್ನು ವಿಧಿಸಲಾಗುತ್ತದೆ. ಈ

ರೀತಿ ವಿಧಿಸಿದ ಅಥವಾ ಕ್ಲೈಮ್ ಮಾಡಿದ ದಿನಾಂಕದಿಂದ ಮೊತ್ತವನ್ನು ಗ್ರಾಹಕರು 30 ದಿನಗಳೊಳಗಾಗಿ ಪಾವತಿಮಾಡಬೇಕಾಗುತ್ತದೆ, ಇಲ್ಲದೇ ಹೋದಲ್ಲಿ ಅನುಸ್ಥಾಪನೆಯ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಲಾಗುತ್ತದೆ ಮತ್ತು ಕ್ಲೈಮ್ ಮಾಡಿದ ಮೊತ್ತವನ್ನು ವಿದ್ಯುತ್ ಶುಲ್ಕದ ಬಾಕಿ ಎಂದು ಪರಿಗಣಿಸಲಾಗುತ್ತದೆ.

ಅವಧಿ ಮತ್ತು ದುರುಪಯೋಗಪಡಿಸಿಕೊಂಡ ಶಕ್ತಿಯ ಪ್ರಮಾಣವನ್ನು ಯಾವ ಆಧಾರದ ಮೇಲೆ ಮೌಲ್ಯಮಾಪನ ಅಧಿಕಾರಿಯು ನಿರ್ಣಯಿಸುತ್ತಾನೋ, ಸದರಿ ನಿರ್ಣಯ ಹಾಗೂ ಅದರ ಆಧಾರವನ್ನು ಲಿಖಿತ ರೂಪದಲ್ಲಿ ಗ್ರಾಹಕನಿಗೆ ತಿಳಿಸಬೇಕಾಗುತ್ತದೆ. ತದನಂತರ ಗ್ರಾಹಕನಿಗೆ ಮೌಲ್ಯಮಾಪನ ಅಧಿಕಾರಿಯ ನಿರ್ಣಯವನ್ನು ಪರಿಶೀಲನೆ ಮಾಡಲು ಅವಕಾಶ ನೀಡಲಾಗುತ್ತದೆ ಹಾಗೂ ಪ್ರಮಾಣಾನುಗುಣ ಬಳಕೆ ಮತ್ತು ಬೇಡಿಕೆಯ ಶುಲ್ಕಗಳ ಮೇಲೆ ಅನ್ವಯವಾಗುವ ಸುಂಕ/ ಅನುಸ್ಥಾಪನೆಯ ಸ್ಥಿರ ಶುಲ್ಕಗಳು ವಿದ್ಯುತ್ ಕಡಿತದ ಅವಧಿಯ ಸಂದರ್ಭದಲ್ಲಿ ಹೆಚ್ಚಿನ ಸುಂಕಕ್ಕೆ ಅನ್ವಯವಾಗುವಂತೆ ಅರ್ಹತೆಯನ್ನು ಪರಿಷ್ಕರಿಸಲಾಗುತ್ತದೆ. ಇಂತಹ ದುರುಪಯೋಗವನ್ನು ಮೂರು ತಿಂಗಳೊಳಗೆ ಕ್ರಮಬದ್ಧಗೊಳಿಸಬೇಕು, ವಿಫಲವಾದರೆ, ಅನುಸ್ಥಾಪನೆಗೆ ವಿದ್ಯುತ್ ಪೂರೈಕೆಯನ್ನು ಕಡಿತಗೊಳಿಸಲಾಗುತ್ತದೆ ಎಂಬಂತೆ ಇರುವುದು ಕಂಡುಬರುತ್ತದೆ.

23) ಪ್ರಸ್ತುತ ಪ್ರಕರಣದಲ್ಲಿ ಅಪೀಲುದಾರರು ಒಪ್ಪಿಕೊಂಡು ಅಕ್ಟೋಬರ್ 2021ರಿಂದ GHT-80 ಸ್ಥಾವರದ ವಿದ್ಯುತ್ತನ್ನು ವಾಣಿಜ್ಯ ಉದ್ದೇಶಕ್ಕಾಗಿ ಬಳಕೆ ಮಾಡಿಕೊಳ್ಳುತ್ತಿರುವುದರಿಂದ ಸಂಬಂಧಿತ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)ರವರು ಈ ಬಗ್ಗೆ ಪರಿಶೀಲಿಸಿ ವಿಧಿಸಿರುವ ಮೊತ್ತವು

ನಿಯಮಾನುಸಾರ ಇರುತ್ತದೆ. ಅಪೀಲುದಾರರು ತಮ್ಮ ಆಯಿಲ್ ಮಿಲ್‌ನ ಉದ್ಯಮಕ್ಕೆ ಕರೋನಾ ಸಂಕ್ರಾಮಿಕ ರೋಗದ ಕಾರಣದಿಂದ ನಷ್ಟ ಉಂಟಾಗಿದ್ದು ಅದನ್ನು ಭರ್ತಿ ಮಾಡಲು ವಾಣಿಜ್ಯೋದ್ದೇಶಕ್ಕಾಗಿ GHT-80 ಸ್ಥಾವರದ ವಿದ್ಯುತ್ ಬಳಕೆ ಮಾಡಿಕೊಳ್ಳುತ್ತಿದ್ದೇವೆ ಎಂದು ನುಡಿದಿರುವುದನ್ನು ಒಪ್ಪಲಾಗುವುದಿಲ್ಲ, ಏಕೆಂದರೇ, ಇದು ನಿಯಮ ಬಾಹಿರವಾಗಿರುತ್ತದೆ. ಒಂದು ವೇಳೆ ಆ ರೀತಿ ಇದ್ದಿದ್ದೇ ಆದಲ್ಲೀ ಅಪೀಲುದಾರರು ತಮಗೆ ಈಗಾಗಲೇ ನೀಡಲಾಗಿದ್ದ ಜಕಾತಿಯನ್ನು ವಾಣಿಜ್ಯ ಜಕಾತಿಗೆ ಬದಲಾವಣೆ ಮಾಡಿಕೊಡುವಂತೆ ಲೈಸೆನ್ಸ್‌ದಾರರನ್ನು ಕೋರಿ ಅದರಂತೆ ವಿದ್ಯುತ್‌ನ ಬಳಕೆ ಮಾಡಬೇಕಿತ್ತು. ಆದರೇ ಆ ರೀತಿ ಮಾಡಿರುವುದಿಲ್ಲ, ಆದಾಗ್ಯೂ ಗ್ರಾಹಕರ ಪರಿಸ್ಥಿತಿಯನ್ನು ಅವಲೋಕಿಸಿ ಎರಡನೇ ಪ್ರತಿವಾದಿ/ಗ್ರಾಹಕರ ಕುಂದು ಕೊರತೆಗಳ ನಿವಾರಣಾ ವೇದಿಕೆರವರು ಸಬ್ ಮೀಟರ್‌ನ್ನು (sub-meter) ಅಳವಡಿಸಿಕೊಳ್ಳಲು ಆದೇಶಿಸಿರುತ್ತಾರೆ.

24) ವಾದವಿವಾದದ ಕಾಲದಲ್ಲಿ ಅಪೀಲುದಾರರು ತಾವು 26.01.2022ರಂದು ಸಬ್ ಮೀಟರ್‌ನ್ನು (sub-meter) ಖರೀದಿಸಿದ್ದೇವೆಂದು ದಿನಾಂಕ 17.02.2022ರ ಪತ್ರದ ಮೂಲಕ ಸಬ್ ಮೀಟರ್‌ನ್ನು (sub-meter) ಅಳವಡಿಸಿಕೊಳ್ಳಲು ಅನುಮತಿ ಕೋರಿದ್ದೇವೆಂದು ಅದರಂತೆ ದಿನಾಂಕ 17.02.2022ಕ್ಕೆ ಅನ್ವಯವಾಗುವಂತೆ ಸಬ್ ಮೀಟರ್‌ನ್ನು (sub-meter) ಮಂಜೂರು ಮಾಡಿಕೊಡಬೇಕೆಂದು ಪ್ರಾರ್ಥಿಸಿರುತ್ತಾರೆ. ಆದರೇ ಈ ಪತ್ರಕ್ಕೆ ದಿನಾಂಕ 22.02.2022ರಂದು ಒಂದನೇ ಪ್ರತಿವಾದಿಯವರು ಉತ್ತರಿಸುತ್ತಾ "ಡಾಬಾ, ವೇ ಬ್ರಿಡ್ಜ್ ಮತ್ತು ಸ್ವಿಮ್ಮಿಂಗ್ ಪೂಲ್‌ಗೆ (swimming pool) ಪ್ರತ್ಯೇಕವಾಗಿ ಮೀಟರನ್ನು ಅಳವಡಿಸಲು ಅವಕಾಶವಿಲ್ಲದ ಕಾರಣ, ಡಾಬಾ, ವೇ ಬ್ರಿಡ್ಜ್

ಮತ್ತು ಸ್ವಿಮ್ಮಿಂಗ್ ಪೂಲ್‌ಗೆ (swimming pool) ಒಂದು ಸಂಖ್ಯೆಯ ವಾಣಿಜ್ಯ ಬಳಕೆಯ ಮೀಟರನ್ನು ನೀಡಲು ಅವಕಾಶವಿದ್ದು, ತಮಗೆ ಅಗತ್ಯವಿರುವ ಕಿ.ವ್ಯಾ ವಿದ್ಯುತ್ತನ್ನು ನಿಯಮಾನುಸಾರ ಪಡೆಯಲು ತಿಳಿಸಲಾಗಿದೆ" ಎಂಬುದಾಗಿ ಉತ್ತರಿಸಿರುತ್ತಾರೆ. ಈ ಪತ್ರದ ಸಂಗತಿಗಳನ್ನು ಗ್ರಾಹಕರ ಕುಂದು ಕೊರತೆಗಳ ನಿವಾರಣಾ ವೇದಿಕೆ/ಎರಡನೇ ಪ್ರತಿವಾದಿಯು ತಳ್ಳಿಹಾಕಿರುವುದಿಲ್ಲ, ಆದ ಕಾರಣ ದಿನಾಂಕ 17.02.2022ರ ಅರ್ಜಿಯನ್ನು ಪರಿಗಣಿಸಿ ಅದೇ ದಿನಾಂಕದಿಂದ ಅನ್ವಯವಾಗುವಂತೆ ಸಬ್ ಮೀಟರ್‌ನ್ನು (sub-meter) ಅಳವಡಿಸಿಕೊಡಬೇಕು ಎಂದು ಅಪೀಲುದಾರರು ಕೋರಿರುವುದನ್ನು ಒಪ್ಪಲಾಗುವುದಿಲ್ಲ.

25) ಎರಡನೇ ಪ್ರತಿವಾದಿ/ಗ್ರಾಹಕರ ಕುಂದು ಕೊರತೆಗಳ ನಿವಾರಣಾ ವೇದಿಕೆರವರು ತಮ್ಮ ಆದೇಶದಲ್ಲಿ

1. *ಈ ಆದೇಶದ ದಿನಾಂಕದಿಂದ 15 ದಿನಗಳೊಳಗಾಗಿ ಅರ್ಜಿದಾರರಾದ ಶ್ರೀ ಎಫ್. ಶಣ್ಮುಕಪ್ಪ, ತಂಡೆ ಪಕ್ಕಿರಪ್ಪ, ಮೆ|| ಬಸವೇಶ್ವರ ಆಯಿಲ್ ಇಂಡಸ್ಟ್ರೀಸ್, ಗಂಗಾವತಿ ರವರು ತಮ್ಮ ಸ್ಥಾವರ ಸಂಖ್ಯೆ: ಜಿ.ಹೆಚ್.ಟಿ-80 ಕ್ಕೆ ಸಬ್ ಮೀಟರ್‌ನ್ನು ಅಳವಡಿಸಿಕೊಳ್ಳುವುದು. ಸದರಿ ಸ್ಥಾವರಕ್ಕೆ ಸಬ್‌ಮೀಟರ್ ಅಳವಡಿಸಲು ಕಾರ್ಯನಿರ್ವಾಹಕ ಅಭಿಯಂತರರು(ವಿ) ವಿಭಾಗ ಗುವಿಸಕಂನಿ., ಗಂಗಾವತಿ ರವರು ತಕ್ಷಣವೇ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳುವುದು.*
2. *ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಹೆಚ್.ಟಿ. ರೇಟಿಂಗ್ ಉಪ-ವಿಭಾಗ ಗುವಿಸಕಂನಿ., ಕೊಪ್ಪಳರವರು ಹಿಂಬಾಕಿ ಮೊತ್ತವನ್ನು ಸಾಮಾನ್ಯ ದರದಲ್ಲಿ ವಿಧಿಸಿದ್ದು, ಇ.ಎಸ್. & ಡಿ. ಕೋಡ್ 42.02 ರನ್ವಯ ಗ್ರಾಹಕನು ಒಪ್ಪಂದ ಮಾಡಿಕೊಂಡ ಜಕಾತಿಯಲ್ಲಿ ವಿದ್ಯುತ್‌ನ್ನು ಉಪಯೋಗಿಸದೇ ಇರುವುದರಿಂದ ಬಳಸುತ್ತಿರುವ ಜಕಾತಿಯ ದರದ ಎರಡರಷ್ಟನ್ನು ದಂಡದ ರೂಪದಲ್ಲಿ ಪಾವತಿಸಬೇಕಾಗಿರುತ್ತದೆ. ಆದ್ದರಿಂದ ಕಾರ್ಯನಿರ್ವಾಹಕ ಅಭಿಯಂತರರು(ವಿ) ಉಪ-ವಿಭಾಗ ಗುವಿಸಕಂನಿ.,*

*ಗಂಗಾವತಿ ರವರು ಈಗಾಗಲೇ ಮಾಡಿರುವಂತಹ ಹಿಂಬಾಕಿ ಮೊತ್ತವನ್ನು ಪರಿಷ್ಕರಿಸುವುದು. ದಿನಾಂಕ 01.07.2021 ರಿಂದ 28.02.2022 ರವರೆಗೆ ಹೆಚ್.ಟಿ-2ಬಿ ಜಕಾತಿಯಲ್ಲಿ ದ್ವಿಗುಣ ದರದಲ್ಲಿಯೇ ಬಿಲ್ಲನ್ನು ತಯಾರಿಸಿ ಗ್ರಾಹಕರಿಗೆ ಪಾವತಿಸಲು ಸೂಚಿಸುವುದು.*

*3. ದಿನಾಂಕ 01.04.2022 ರಿಂದ ಹೆಚ್.ಟಿ-2ಬಿ ಜಕಾತಿಯಲ್ಲಿ ಸಾಮಾನ್ಯ ದರದಲ್ಲಿ ಬಿಲ್ ಮಾಡುವುದು.*

ಎಂಬುದಾಗಿ ಆದೇಶಿಸಿರುತ್ತಾರೆ. ಸದರಿ ಆದೇಶವು ನ್ಯಾಯೋಚಿತವಾಗಿರುತ್ತದೆ ಆದ್ದರಿಂದ ಎರಡನೇ ಎದುರುದಾರರ ಪ್ರಶ್ನಿತ ಆದೇಶದಲ್ಲಿ ಈ ಪ್ರಾಧಿಕಾರದ ಹಸ್ತಕ್ಷೇಪದ ಅಗತ್ಯ ಇರುವುದಿಲ್ಲ ಎಂದು ಅಭಿಪ್ರಾಯ ಪಡುತ್ತಾ ಒಂದನೇ ಅಂಶಕ್ಕೆ ನಕಾರಾತ್ಮಕವಾಗಿ ಉತ್ತರಿಸಿದ್ದೇನೆ.

26) **<u>ಅಂಶ 2: -</u>** ಈಗಾಗಲೇ ಈ ಮೇಲೆ ಅಂಶ 1ರಲ್ಲಿ ಚರ್ಚಿಸಿದ ಕಾರಣಗಳಿಗಾಗಿ, ಈ ಕೆಳಕಂಡಂತೆ ಆದೇಶ ಮಾಡುತ್ತಿದ್ದೇನೆ.

**ಸಂಖ್ಯೆ: OMB/G/G-493/2022/D-137** **ದಿನಾಂಕ: 28.10.2022**

# <u>ಆದೇಶ</u>

ಅಪೀಲನ್ನು ವಜಾಮಾಡಲಾಗಿದೆ.

ಪ್ರಕರಣ ಸಂಖ್ಯೆ: ಸಿ.ಜಿ.ಆರ್.ಎಫ್: 02/28.03.2022, ಆದೇಶ ಸಂಖ್ಯೆ: ಅಇಂ(ವಿ)/ಉಲೆನಿ/ಲೆಅ/ಸಲೆಅ/ಹಿಸ(ಸಿ)ಕ-84/2022-2023/1091-99ರಲ್ಲಿ ಎರಡನೇ ಪ್ರತಿವಾಧಿಯು ದಿನಾಂಕ 08.06.2022ರಂದು ಮಾಡಿರುವ ಆದೇಶವನ್ನು ಸ್ಥಿರಗೊಳಿಸಲಾಗಿದೆ.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಗ್ರಾಹಕರ ಕುಂದುಕೊರತೆಗಳ ನಿವಾರಣಾ ವೇದಿಕೆ ಹಾಗೂ ಓಂಬಡ್ಸಮನ್) ನಿಯಮಗಳು 2004ರ, 22.7ರ ನಿಯಮಗಳ ಅಡಿಯಲ್ಲಿ ನಿಗದಿಪಡಿಸಲಾದ ನಿಬಂಧನೆಗಳನ್ನು ಅನುಸರಿಸಲು ಕಚೇರಿಗೆ ನಿರ್ದೇಶಿಸಲಾಗಿದೆ.

ಸಹಿ/-
(ಆರ್. ಶಾರದಾ)
ವಿದ್ಯಚ್ಛಕ್ತಿ ಲೋಕಪಾಲರು

**<u>ಪ್ರತಿಯನ್ನು:</u>**

1. ಶ್ರೀ ಎಫ್. ಶಣ್ಮುಕಪ್ಪ,
   ತಂದೆ ಶ್ರೀ ಫಕೀರಪ್ಪ,
   ನಂ. 04, ಸಿದ್ದಿಕೆರಿ ಕ್ಯಾಂಪ್,
   <u>ಗಂಗಾವತಿ - 583227.</u>

2. ಶ್ರೀ ಸುಭಾಷ್ ಹೊಸಮನಿ,
   ತಂದೆ ಶ್ರೀ ಸೋಮಪ್ಪ ಹೊಸಮನಿ,
   ಶ್ರೀ ಬಸವೇಶ್ವರ ಆಯಿಲ್ ಇಂಡಸ್ಟ್ರೀಸ್,
   ರಾಯಚೂರ್ ರಸ್ತೆ,
   <u>ಗಂಗಾವತಿ.</u>

3. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ),
   ಕಾರ್ಯ ಮತ್ತು ಪಾಲನ ಉಪ ವಿಭಾಗ, ಜೆಸ್ಕಾಂ,
   <u>ಗಂಗಾವತಿ.</u>

4. ಅಧ್ಯಕ್ಷರು,
   ಗ್ರಾಹಕರ ಕುಂದುಕೊರತೆ ನಿವಾರಣಾ ವೇದಿಕೆ,
   ಕಾರ್ಯ ಮತ್ತು ಪಾಲನ ವೃತ್ತ, ಜೆಸ್ಕಾಂ,
   <u>ಕೊಪ್ಪಳ.</u>

5. ಮಾನ್ಯ ಅಧ್ಯಕ್ಷರು, ಕವಿನಿಆ ರವರ ಆಪ್ತ ಕಾರ್ಯದರ್ಶಿ
6. ಮಾನ್ಯ ಸದಸ್ಯರು (M), ಕವಿನಿಆ ರವರ ಆಪ್ತ ಕಾರ್ಯದರ್ಶಿ
7. ಮಾನ್ಯ ಸದಸ್ಯರು (R), ಕವಿನಿಆ ರವರ ಆಪ್ತ ಕಾರ್ಯದರ್ಶಿ
8. ಕಾರ್ಯದರ್ಶಿ, ಕವಿನಿಆ ರವರ ಆಪ್ತ ಸಹಾಯಕರು.